ಪ್ರಾರಂಭಿಸುವ ಇರದೆ ಸರ್ಕಾರಕ್ಕೆ ಇದೆಯೇ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಬಂದ ತಕ್ಷಣ ಮಾತನಾಡಿ, ಅದಕ್ಕೆ ಸಂಬಂಧಪಟ್ಟ ವರದಿಯನ್ನು ಈ ದಿವಸವೇ ಸದನದಲ್ಲಿ ನಾನು ಕೊಡುತ್ತೇನೆ.

ಕೋಲಾರ ಜಿಲ್ಲೆಯ ಇಂಜಿನಿಯರುಗಳ ಸಂಘದಿಂದ ಪ್ರತಿಭಟನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧಕ್ಷರೇ, ನಿನ್ನೆ ದಿವಸ ಕೋಲಾರ ಜಿಲ್ಲೆ ಇಂಜಿನಿಯರುಗಳ ಸಂಘ ಪ್ರತಿಭಟನೆಯನ್ನು ಮಾಡಿದೆ. ಮತ್ತೆ ಅವರೊಂದು ಮನವಿಯನ್ನು ಕೂಡ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರಲ್ಲಿ ಕಡೆಯದಾಗಿ ಏನು ಹೇಳುತ್ತಾರೆ.ಎಂದರೆ''ನಮ್ಮ ಮನವಿಗೆ ಮನ್ನಣೆ ದೊರಕದಿದ್ದರೆ ನಾವು ರಾಜ್ಯಾದ್ಯಂತ ಪ್ರತಿಭಟನೆ ಮಾಡುವ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಅವಗಾಹನೆಗೆ ತರಲು ಬಯಸುತ್ತೇವೆ. ಇದಕ್ಕೆ ಕಾರಣ ಏನು ಎಂದು ಹೇಳಿದರೆ ಕೋಲಾರ ಜಿಲ್ಲೆಯಲ್ಲಿ ಮುಖ್ಯವಾಗಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕೆಲವು ಇಂಜಿನಿಯರುಗಳು ಮಾಡಿರುವ ಅವ್ಯವಹಾರಗಳ ಬಗ್ಗೆ ಕ್ರಮ ತೆಗೆದುಕೊಂಡಿರುವುದಕ್ಕೆ ಅವರು ಪ್ರತಿಭಟನೆ ಮಾಡಿದ್ದಾರೆ. ಅವರೇ ಕೊಟ್ಟಿರುವ ಮೆಮೊರಾಂಡಂನಲ್ಲಿ ಹೇಳುತ್ತಾರೆ. ಕೆಲಸ ಅಪೂರ್ಣವಾಗಿರುವುದು ನಿಜ, ಕೆಲವು ವಸ್ತುಗಳು ಕಳುವು ಆಗಿರುವುದೂ ನಿಜ ಎಂದು ಹೇಳಿದ್ದಾರೆ. ಈ ರೀತಿ ಅವ್ಯವಹಾರ ಬರೀ ಶ್ರೀನಿವಾಸಪುರ ಮತ್ತು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದೆ. ಏನಾಗಿದೆ ಎಂದರೆ ಆ ಕೆಲಸ ಪ್ರಾರಂಭ ಮಾಡುವಾಗ ಜೂನಿಯರ್ ಇಂಜಿನಿಯರುಗಳು ಮತ್ತು ಇಂಜಿನಿಯರುಗಳು ಒಂದು ನಿರ್ದಿಷ್ಟವಾದ ಕೆಲಸಕ್ಕೆ ಎಷ್ಟು ಹಣ ಸರ್ಕಾರ ಬಿಡುಗಡೆ ಮಾಡಿರುತ್ತೋ ಅಷ್ಟು ಹಣವನ್ನು ಅವರು ಸರ್ಕಾರದ ಖಜಾನೆಯಿಂದ ತೆಗೆದು ಬಿಟ್ಟು ಅವರ ವಶದಲ್ಲಿ ಇಟ್ಟುಕೊಂಡು ಆ ಕೆಲಸವನ್ನು ಅಲ್ಲಿ ಮಾಡಿರುವುದಿಲ್ಲ, ಅಥವಾ ಹಾಗೆ ಉಳಿದಿರುವ ಹಣ ಬ್ಯಾಂಕಿನಲ್ಲಾದರೂ ಇರಬೇಕು. ಅಥವಾ ಅದನ್ನು ಡಿಪಾರ್ಟಮೆಂಟನಲ್ಲಾದರೂ ಇಡಬೇಕು. ಯಾವುದೂ ಇರುವುದಿಲ್ಲ. ಹೀಗಾಗಿ ಕ್ಯೋಟ್ಯಾಂತರ ರೂಪಾಯಿ ಅವ್ಯವಹಾರವಾಗಿದೆ. ಕೋಲಾರ ಜಿಲ್ಲೆಯಲ್ಲಿ ಬಹುಶಃ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಅಪೂರ್ಣವಾಗಿ ಉಳಿದಿರುವ ಕೆಲಸಗಳು ಒಂದು ಭಾಗ. ಅದಕ್ಕೆ ಆಗಿರತಕ್ಕಂಥ ಕೆಲಸಗಳು ಕಳಪೆ ಗುಣಮಟ್ಟದಲ್ಲಿರುವುದು ಇನ್ನೊಂದು ಭಾಗ. ಅದಕ್ಕೆ ಇತಿಮಿತಿಯೇ ಇಲ್ಲ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎರಡು ಪಂಚಾಯಿತಿ ಬಿಲ್ಡಿಂಗ್‌ಗಳು ಪಾಯ ಹಾಕಿಬಿಟ್ಟು ಇಡೀ ಹಣವನ್ನು ಡ್ರಾ ಮಾಡಿದ್ದಾರೆ.

ಅಧ್ಯಕ್ಷರು : ನಿಮ್ಮ ಆಗ್ರಹ ಏನು? ಆ ಇಂಜಿನಿಯರುಗಳ ಮನವಿಯನ್ನು ಪುರಸ್ಕಾರ ಮಾಡಬೇಕೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಆಗ್ರಹ ಏನೆಂದರೆ ಈ ರೀತಿ ಕಳಪೆ ಕಾಮಗಾರಿ ಮತ್ತು ಸರ್ಕಾರಿ ಹಣವನ್ನು ದುರುಪಯೋಗ ಮಾಡಿರುವ ಇಂಜಿನಿಯರುಗಳ ಮೇಲೆ ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರು ಪ್ರತಿಭಟನೆ ಮಾಡುತ್ತಿದ್ದಾರೆ. ಅಂದರೆ ಇದರ ಅರ್ಥವೇನಾಗುತ್ತದೆ ಎಂದರೆ ಸರ್ಕಾರದ ಅಧಿಕಾರಿಗಳು ಅವರು ಇಂಜಿನಿಯರುಗಳು ಆಗಿರಬಹುದು, ಇನ್ನೊಬ್ಬ ಅಧಿಕಾರಿಯಾಗಿರ

ಬಹುದು. ಅವರು ಮಾಡಿದಂಥ ತಪ್ಪಿಗೆ ಸರ್ಕಾರ ಕ್ರಮತೆಗೆದುಕೊಂಡಾಗ, ಹೋರಾಟ ಮಾಡುತ್ತಿರುವಾಗ ಈ ಸರ್ಕಾರ ಯಾವ ರೀತಿ ಅಧಿಕಾರ ನಡೆಸಬೇಕು ಎನ್ನುವುದು ಒಂದು. ಇನ್ನೂದು ಪ್ರಶ್ನೆ ಅವರು ಹೇಳಿರುವುದು ಎಂದರೆ ಅವರನ್ನು ಬಂಧಿಸಲು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿ. ಪಬ್ಲಿಕ್ ಫಂಡ್ ಮಿಸ್ ಅಪ್ರೋಪ್ರಿಯೇಷನ್ ಆದರೆ ಅದು ಕ್ರಿಮಿನಲ್ ಅಫೆನ್ಸ್ ಆಗುತ್ತೆ ಎನ್ನುವುದು ನಿಜ. ಆಗ ಕೇಸನ್ನು ಬುಕ್ ಮಾಡಬೇಕಾಗುತ್ತದೆ. ಅದು ಮಾಡಬಾರದು. ನಮ್ಮ ಮೇಲೆ ತನಿಖೆ ಮಾಡಿ ಎಂದು ಹೇಳುವಂಥ ವಾದ ಇದೆ. ಏಕೆಂದರೆ ಕಾಮಗಾರಿಗಳ ಅವ್ಯವಹಾರ ಬಗ್ಗೆ ತೀರಾ ದುರುಪಯೋಗವಾಗುತ್ತಿದೆ. ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದೆ? ಯಾವ ರೀತಿ ಅದನ್ನು ತಡೆಗಟ್ಟಲಿಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ ಎನ್ನುವುದರ ಬಗ್ಗೆ ಹೇಳಿಕೆಯನ್ನು ಸರ್ಕಾರ ಕೊಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಮಾಹಿತಿಯನ್ನು ಸಾಯಂಕಾಲದ ಹೊತ್ತಿಗೆ ನಾನು ಸದನದಲ್ಲಿ ಕೊಡುತ್ತೇನೆ.

ಅಧ್ಯಕ್ಷರು : ಆ ಮಾಹಿತಿ ಎನೂ ಇಲ್ಲ. ಶ್ರೀನಿವಾಸಪುರ ಎಂದರೆ ನನ್ನಕ್ಷೇತ್ರವಲ್ಲವೇ. ನನ್ನ ಮತಕ್ಷೇತ್ರದಲ್ಲಿ ಪ್ರತಿಯೊಂದು ಹಳ್ಳಿಗೂ ಕೂಡ ಒಂದು ಸಣ್ಣಹಳ್ಳಿಯನ್ನೂ ಬಿಡದೆ ಪ್ರವಾಸ ಮಾಡಿದಾಗ ಕೆಲವು ಹಳ್ಳಿಗಳಲ್ಲಿ ಸ್ಕೂಲ್ ಕಟ್ಟಡವೇ ಆಗಿರಲಿಲ್ಲ. ಇಂಜಿನಿಯರುಗಳನ್ನು ಕರೆಯಿಸಿ ಕೇಳಿದರೆ ಪೂರ್ಣವಾಗಿದೆ ಎಂದು ಹಣ ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಕೆಲವು ಕಡೆ ಪಾಯವನ್ನೇ ಹಾಕಿಲ್ಲ. ಅವು ಯಾವ ಯಾವ ಊರಿನಲ್ಲಿ ಆಗಿತ್ತು, ಅದನ್ನು ಪಟ್ಟಿ ಮಾಡಿ ಜಿಲ್ಲಾಪಂಚಾಯಿತಿಗೆ ಕ್ರಮ ತೆಗೆದುಕೊಳ್ಳಲಿ, ಈ ರೀತಿ ಹಣ ಬಳಕೆಯಾಗಿದೆ. ಆದರೆ ಕೆಲಸವಾಗಿಲ್ಲ ಎಂದು ಹೇಳಿದೆ. ಅದರೆ ಮೇಲೆ ಜಿಲ್ಲಾಮಂತ್ರಿಗಳು ರೆವ್ಯೂ ಮಾಡಿದಾಗ ಎಲ್ಲಾ ಮಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಮ್ಮ ಮತದಾರರ ಕ್ಷೇತ್ರ ಎಂದಲ್ಲ. ಇಡೀ ಕೋಲಾರ ಕ್ಷೇತ್ರದಲ್ಲಿ ಅದು ಆಗಿದ್ದರೆ ಈಗ ನಾನು ಅದರ ವಿವರವನ್ನು ತೆಗೆದುಕೊಂಡು ಬಂದು.

ಅಧ್ಯಕ್ಷರು : ಈಗ ಶ್ರೀರಾಮರೆಡ್ಡಿ ಮಾಡಿದ್ದುದು ಏನು ಎಂದರೆ ನಮ್ಮ ಜಿಲ್ಲೆಯಲ್ಲಿ ಇಂಥವು ನಡೆಯುತ್ತದೆ ಎಂದು ದೇಶಕ್ಕೆಲ್ಲಾ ಹೇಳಿದಂತೆ ಆಯಿತು. ನಮ್ಮ ಮರ್ಯಾದೆ ಹೋಯಿತು.

ಶ್ರೀ ಎಂ.ಪಿ. ಪ್ರಕಾಶ್ : ತತ್‌ಕ್ಷಣದಲ್ಲಿ ಕ್ರಮ ಕೈಗೊಳ್ಳುವುದಕ್ಕೆ ನಾನು ಕಾರ್ಯದರ್ಶಿಗಳಿಗೆ ಆದೇಶ ಕೊಡುತ್ತೇನೆ ಮತ್ತು ಸಾಧ್ಯವಾದರೆ ಇದರ ಬಗ್ಗೆ ಎಲ್ಲೆಲ್ಲಿ ಸಿ.ಓ.ಡಿ ಎನಕ್ವೈರಿ ಮಾಡಿಸುವುದಕ್ಕೆ ಸಾಧ್ಯತೆ ಇದ್ದರೂ ಮಾಡಿಸುತ್ತೇನೆ.

ಶ್ರೀ ಜಿ.ವಿ. ರಾಮರೆಡ್ಡಿ : ಸಿ.ಓ.ಡಿ ಎನಕ್ವೈರಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಇವರಿಗೆ ಪ್ರಾಮಾಣಿಕವಾಗಿ ತನಿಖೆ ಮಾಡಬೇಕು ಎಂದರೆ ಬಹುಶಃ ಬೇರೆ ಯಾವುದಾದರೂ ವ್ಯವಸ್ಥೆ ಮಾಡಿಸಬೇಕು.

ಅಧ್ಯಕ್ಷರು : ಯಾವುದೂ ಬೇಡ. ಇರುವುದರಲ್ಲೇ ಮಾಡಲಿ ಬಿಡಿ. ಸಿ.ಓ.ಡಿ.ಯಿಂದ ಬೇಕಾದರೆ ಮಾಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಸಿ.ಓ.ಡಿ ತನಿಖೆ ಮಾಡಿಸಿ ಬೇಕಾದರೆ ವಿವರವನ್ನು ತರಿಸಿಕೊಂಡು ನಾನು ಈ ದಿವಸವೇ ಕಾರ್ಯದರ್ಶಿಗಳಿಗೆ ಆದೇಶವನ್ನು ಕೂಡುತ್ತೇನೆ. ನಾನು ಮುಖ್ಯಕಾರ್ಯದರ್ಶಿಗಳಿಗೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರು ಕನ್ನಡ ಚಿತ್ರೋದ್ಯಮದ ಬಗ್ಗೆ ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಿರಿ.

ರಾಜ್ಯದಲ್ಲಿ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಅದನ್ನು ಪ್ರಸ್ತಾಪ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ನಾನು ತಮ್ಮ ಮೂಲಕ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ. ಕನ್ನಡ ಚಿತ್ರೋದ್ಯಮದ ಬಗ್ಗೆ ಕಡ್ಡಾಯ ಚಿತ್ರಗಳ ಪ್ರದರ್ಶನ ಆಗಬೇಕು ಎಂದು ಹೇಳಿ ಒಂದು ದೊಡ್ಡ ಹೋರಾಟ ನಡೆಯುತ್ತಿದೆ. ಈ ಬಗ್ಗೆ ತಾವೊಂದು ಸಭೆಯನ್ನು ತಾವು ಕರೆದಿದ್ದೀರಿ. ಸಭೆಯಲ್ಲಿ ಚಿತ್ರಮಂದಿರದ ಮಾಲೀಕರು, ವಿತರಕರು ಮತ್ತು ನಿರ್ಮಾಪಕರು ಎಲ್ಲರನ್ನೂ ಕರೆಯಿಸಿ ಏನೋ ಒಂದು ತೀರ್ಮಾನಕ್ಕೆ ಬಂದಿದೆ ಎಂದು ಹೇಳಿ ಸಂತೋಷವಾಗಿತ್ತು. ಇಂಥಿಂಥ ದಿವಸವೇ ಕಡ್ಡಾಯವಾಗಿ ಕನ್ನಡ ಚಿತ್ರಗಳು ಆರು ತಿಂಗಳು ಕಾಲ ಕಡ್ಡಾಯ ಚಿತ್ರಗಳ ಪ್ರದರ್ಶನ ಮಾಡಬೇಕು. ಪರಭಾಷಾ ಚಿತ್ರಗಳು ಇಲ್ಲಿ ಪ್ರದರ್ಶನ ಆಗಬೇಕಾದರೆ ಅವರ ರಾಜ್ಯದಲ್ಲಿ ಮೂರು ತಿಂಗಳ ಕಾಲ ಪ್ರದರ್ಶನ ಆದಮೇಲೆ ಇಲ್ಲಿಗೆ ಬರಬೇಕು ಎಂದು ಒಂದು ನೀತಿಯನ್ನು ಮಾಡಿ ತಮ್ಮ ನೀತಿಯನ್ನು ಅವರೆಲ್ಲಾ ಒಪ್ಪಿ ಹೋಗಿದ್ದರು. ಮತ್ತೆ ನೀತಿ ಏನು ಮಾಡಿದ್ದೀರಿ, ಒಂದು ತೀರ್ಮಾನ ಏನು ಕೈಗೊಂಡಿದ್ದೀರಿ, ಅದು ಮುರಿದುಬಿದ್ದು ಬೇರೆ ರೂಪ ತಾಳತಕ್ಕಂಥ ಸ್ಥಿತಿಗೆ ಬಂದಿದೆ. ಆದ್ದರಿಂದ ಕಡೆ ಚಿತ್ರ ಮಂದಿರದವರು ಒಂದು ಕಡೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಕನ್ನಡ ಚಿತ್ರರಂಗ ತತ್ತರಿಸತ್ತಿದೆ. ಈ ಪರಿಸ್ಥಿತಿ ಇರುವಾಗ ಕಡ್ಡಾಯವಾಗಿ ಕನ್ನಡ ಚಿತ್ರಗಳ ಪ್ರದರ್ಶನ ಮಾಡುವುದಕ್ಕೆ ಸರ್ಕಾರದವರು ಪರಿಣಾಮಕಾರಿಯಾಗಿ ಪ್ರಾಮಾಣಿಕವಾದಂಥ ಒಂದು ಕಾಯ್ದೆಯೇನಾದರೂ ಮಾಡುತ್ತೀರೋ? ಈ ಸದನದಲ್ಲಿ ತಾವು ಕಾಯ್ದೆ ತರುವುದಾದರೆ ಸಂತೋಷ. ನಾವೆಲ್ಲಾ ಅದಕ್ಕೆ ಬೆಂಬಲ ಕೊಡುತ್ತೇವೆ. ಆದರೆ ಮತ್ತೊಂದು ತಮ್ಮ ಗಮನಕ್ಕೆ ಬರಬೇಕಾದ್ದು ಎಂದರೆ ಬೇರೆ ಯಾವ ರಾಜ್ಯದಲ್ಲೂ ಕನ್ನಡ ಚಿತ್ರಪ್ರದರ್ಶನ ಇಲ್ಲ. ಕೇರಳದಲ್ಲಾಗಲಿ, ಆಂಧ್ರದಲ್ಲಾಗಲಿ, ತಮಿಳುನಾಡಿನಲ್ಲಾಗಲೀ, ಗೋವಾದಲ್ಲಾಗಲಿ ಎಲ್ಲೂ ಇಲ್ಲ. ಕರ್ನಾಟಕದಲ್ಲಿ ಮಾತ್ರ ಪರಭಾಷಾಚಿತ್ರಗಳು ಧಾರಾಳವಾಗಿ ನೂರು ದಿನ ಇಲ್ಲಿ ಓಡುತ್ತವೆ. ವರ್ಷಗಟ್ಟಲೇ ಓಡುತ್ತವೆ. ಯಾರು ಅದಕ್ಕೆಅಡ್ಡಿಆತಂಕ ಇಲ್ಲ. ಈ ಪರಿಸ್ಥಿತಿ ಇರುವುದರಿಂದ ಪರಭಾಷಾ ಚಿತ್ರಗಳನ್ನು ಸಂಪೂರ್ಣವಾಗಿ ಬಹಿಷ್ಕಾರ ಮಾಡುವ ಒಂದು ನೀತಿಯನ್ನು ಸರ್ಕಾರ ಮಾಡಬೇಕೆಂದು ನನ್ನ ಒತ್ತಾಯ. ಏಕೆಂದರೆ ಚಿತ್ರಗಳ ಬಗ್ಗೆ ಶ್ರೀಮಾನ್ ನಾಣಯ್ಯನವರು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ಮತ್ತು ನಾಣಯ್ಯನವರಿಗೂ ಗೊತ್ತಿದೆ. ತಾವು. ಸೇರಿ ಸಭೆಯನ್ನು ಮಾಡಿದ್ದೀರಿ. ನನಗನಿಸುತ್ತದೆ, ಈಗ ನೇರವಾಗಿ ಮಾಡಬೇಕಾಗಿರುವುದು ಮೊದಲನೆಯದಾಗಿ ಪರಭಾಷಾ ಚಿತ್ರಗಳನ್ನು ಬಹಿಷ್ಕಾರ ಮಾಡಬೇಕು, ಸರ್ಕಾರವೇ ನಿರ್ಧಾರ ಕೈಗೊಳ್ಳಬೇಕು ನನ್ನ ಪ್ರಕಾರ.